ಸಾಕ್ಷಿಯನ್ನು ದಿ: 19.04.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಆರ್.ಡಬ್ಲ್ಯೂ-1

**ಪಾಟೀಸವಾಲುಃ- ಪಿರ್ಯಾದುದಾರರ ಪರ ವಕೀಲರಿಂದ ಃ-**

1. ನಾನು ಎಸ್.ಎಲ್.ಎಲ್.ಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮಲೆಮಹದೇಶ್ವರ ಬೆಟ್ಟದಲ್ಲಿ ಇಂಗ್ಲೀಷ್ ಬೆರಳಚ್ಚುಗಾರ್ತಿಯಾಗಿ ಕೆಲಸ ನಿರ್ವಹಿಸಿದ್ದು ಮೇ 2023 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ಮಲೆಮಹದೇಶ್ವರ ಬೆಟ್ಟದಲ್ಲಿ ಸ್ವಂತ ಮನೆಯಲ್ಲಿ ವಾಸವಾಗಿದ್ದೇನೆ. ನಾನು ಪ್ರಾರಂಭದಿಂದಲೂ ಬೆರಳಚ್ಚುಗಾರ್ತಿಯಾಗಿ ಕೆಲಸ ಮಾಡಿರುತ್ತೇನೆ. ನಾನು 1988 ರಿಂದ 2023 ರವರಗೆ ಕೆಲಸ ಮಾಡಿರುತ್ತೇನೆ. ನಾನು ಎಸ್.ಬಿ.ಎಂ ಮಹದೇಶ್ವರ ಬೆಟ್ಟ ಶಾಖೆಯಲ್ಲಿ ಕೆಲಸಕ್ಕೆ ಸೇರಿದಾಗಿನಿಂದಲೂ ಖಾತೆ ಹೊಂದಿರುತ್ತೇನೆ. ನಾನು ಬ್ಯಾಂಕಿನಲ್ಲಿ ಖಾತೆ ತೆರೆದಾಗಿನಿಂದ ಬ್ಯಾಂಕ್ ವ್ಯವಹಾರ ಮಾಡುತ್ತೇನೆ. ನನ್ನ ಖಾತೆಯಿಂದು ಎಷ್ಟು ಚೆಕ್ಕುಪುಸ್ತಕಗಳನ್ನು ಪಡೆದುಕೊಂಡಿರುತ್ತೇನೆಂದು ನಿಖರವಾಗಿ ಹೇಳಲು ಬರುವುದಿಲ್ಲ. ನಾನು ಚೆಕ್ ಮುಖಾಂತರ ವ್ಯವಹಾರ ಮಾಡಿರುತ್ತೇನೆ. ನನಗೆ ಖಾಲಿ ದಾಖಲಾತಿಗಳಿಗೆ ಸಹಿ ಮಾಡುವ ಅಭ್ಯಾಸ ಇರುವುದಿಲ್ಲ. ನಾನು ಯಾವುದಾದರೂ ವ್ಯವಹಾರ ಮಾಡಬೇಕಾದರೆ ದಾಖಲಾತಿಗಳನ್ನು ತಿಳಿದುಕೊಂಡು ಮಾಡುತ್ತೇನೆಂದರೆ ಸರಿ. ನನ್ನ ಮುಖ್ಯ ವಿಚಾರಣೆಯನ್ನು ನಾನೇ ಹೇಳಿ ಬರೆಸಿರುತ್ತೇನೆ. ನಿಪಿ.1 ನನಗೆ ಸೇರಿದ ಚೆಕ್ಕು ಎಂದರೆ ಸರಿ. ನಿಪಿ.1 ರಲ್ಲಿ ನಾನೇ ಸಹಿ ಮಾಡಿರುತ್ತೇನೆಂದರೆ ಸರಿ. ನಿಪಿ.1 ರ ಚೆಕ್ಕು ಸಂಃ 901927 ಇರುತ್ತದೆ. ನಿಪಿ.2 ನ್ನು ನಿಪಿ.1 ರ ಚೆಕ್ಕಿಗೆ ಸಂಬಂದಪಟ್ಟಂತೆ ಕೊಡಲಾಗಿದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ 5 ಚೆಕ್ಕುಗಳು ಜುಲೈ 2013 ರಲ್ಲಿ ಕಳೆದು ಹೋಗಿರುತ್ತವೆ ಎಂದು ತಿಳಿಸಿರುತ್ತೇನೆಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಚೆಕ್ಕುಗಳಲ್ಲಿ ನಿಪಿ.1 ಸೇರಿರುವುದಿಲ್ಲ ಎಂದರೆ ಸರಿ. ನಿಪಿ.1 ಕಳೆದುಹೋದ ಬಗ್ಗೆ ಯಾವುದೇ ದೂರು ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ಚೆಕ್ಕುಗಳು ಕಳೆದು ಹೋಗಿರುತ್ತವೆಂದು ದೂರು ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ನಿಡಿ.4 ರ ಪ್ರಕಾರ ನಾನು 3 ಚೆಕ್ಕುಗಳು ಕಳೆದು ಹೋಗಿರುತ್ತವೆ ಎಂದು ನನ್ನ ಬ್ಯಾಂಕಿಗೆ ದೂರನ್ನು ಕೊಟ್ಟಿರುತ್ತೇನೆಂದರೆ ಸರಿ. ಸದರಿ ಚೆಕ್ಕುಗಳು ನಮ್ಮ ಕಛೇರಿಯಲ್ಲಿ ಕಳೆದು ಹೋಗಿರುತ್ತದೆ ಎಂದು ದೂರು

ಕೊಟ್ಟಿರುತ್ತೇನೆ. ನಿಡಿ.4 ರಲ್ಲಿ ತಿಳಿಸಿದ ಮೂರು ಚೆಕ್ಕುಗಳನ್ನು ಹೊರತು ಪಡಿಸಿದು ಬೇರೆ ಚೆಕ್ಕುಗಳು ಕಳೆದು ಹೋದ ಬಗ್ಗೆ ಯಾವುದೇ ದೂರು ಕೊಟ್ಟಿಲ್ಲ. ನಿಡಿ.4 ರಲ್ಲಿ ನನ್ನ ಮಗಳ ವ್ಯಯಕ್ತಿಕ ವಿಚಾರಗಳಿಗೆ ಸಂಬಂಧಿಸಿದಂತೆ ಸದರಿ ಚೆಕ್ಕುಗಳನ್ನು ಇಟ್ಟುಕೊಂಡಿದ್ದೆ ಎಂದು ತಿಳಿಸಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ಗಂಡನ ವ್ಯವಹಾರಕ್ಕೆ ಚೆಕ್ಕುಗಳನ್ನು ನನ್ನ ಬಳಿ ಇಟ್ಟುಕೊಂಡಿದ್ದೆ ಎಂದು ತಿಳಿಸಿರುತ್ತೇನೆಂದರೆ ಸರಿ. ನಾನು ವಾಸ ಮಾಡುವ ಮನೆಯನ್ನು ಸುಮಾರು 20 ವರ್ಷಗಳ ಹಿಂದೆ ಕಟ್ಟಿಸಿರುತ್ತೇವೆ. ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಗಂಡ ವಾಸಮಾಡುತ್ತೇವೆ. ನನ್ನ ಮಗಳು ಮೈಸೂರಿನಲ್ಲಿರುತ್ತಾಳೆ ಮತ್ತು ಮಗ ಬೆಂಗಳೂರಿನಲ್ಲಿ ಇರುತ್ತಾನೆ. ನನ್ನ ಮಗ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದಾನೆ. ನನ್ನ ಮಗ ಎಂ.ಬಿ.ಎ ಓದಿರುತ್ತಾನೆ. ನನ್ನ ಗಂಡ ಪಿ.ಡಬ್ಲ್ಯೂ.ಡಿ ಕಂಟ್ರಾಕ್ಟರ್ ಕೆಲಸ ಮಾಡುತ್ತಾರೆ. ನನ್ನ ಮಗನ ವಿರುದ್ದ ಹಣ ದುರುಪಯೋಗ ಮಾಡಿಕೊಂಡಿರುತ್ತಾನೆಂದು ಕ್ರಿಮಿನಲ್ ಮೊಕದ್ದಮೆ ದಾಖಲಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಈಗ ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದುರುಪಯೋಗವಾದ ಹಣವು ನನ್ನ ಗಂಡನ ಖಾತೆಗೆ ವರ್ಗಾವಣೆಯಾಗಿತ್ತು ಎಂಬ ಆರೋಪ ಮಾಡಿರುತ್ತಾರೆಂದರೆ ಸರಿ. ನನ್ನ ಮಗನಿಗೆ ನಾನೇ ಜಾಮೀನು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ನಿಡಿ.5 ರಿಂದ 7 ರ ಪಿರ್ಯಾದಿನಲ್ಲಿ ಇರುವ ಚೆಕ್ಕು ಸಂಃ 521132 ಇರುತ್ತದೆ. ನಾನು ಬ್ಯಾಂಕಿಗೆ ಕೊಟ್ಟ ದೂರಿನಲ್ಲಿ ಸಹ ನಿಡಿ.5 ರ ಪಿರ್ಯಾದಿನ ಚೆಕ್ಕಿನ ಬಗ್ಗೆ ತಿಳಿಸಿಲ್ಲ ಎಂದರೆ ಸರಿ. ರಂಗನಾಥ್ ಎಂಬ ವ್ಯಕ್ತಿ ನನ್ನ ವಿರುದ್ದ ನರಸೀಪುರ ನ್ಯಾಯಾಲಯದಲ್ಲೂ ಚೆಕ್ ಪ್ರಕರಣ ದಾಖಲು ಮಾಡಿರುತ್ತಾರೆ. ಸದರಿ ರಂಗನಾಥ ಸಲ್ಲಿಸಿದ ಪಿರ್ಯಾದಿನಲ್ಲಿ ನನಗೆ ಶಿಕ್ಷೆಯಾಗಿರುತ್ತದೆ. ನನ್ನ ವಿರುದ್ದ ಮೈಸೂರು ನ್ಯಾಯಾಲಯ ಮತ್ತು ಕೆ ಆರ್ ಪೇಟೆ ನ್ಯಾಯಾಲಯದಲ್ಲಿ ಸಾಕಷ್ಟು ಚೆಕ್ ಪ್ರಕರಣಗಳು ದಾಖಲಾಗಿರುತ್ತವೆ ಎಂದರೆ ಸರಿ. ನಿಡಿ.8 ರಲ್ಲಿ ತಿಳಿಸಿದ ನೋಟೀಸಿನಲ್ಲಿ ನಿಪಿ.1 ರ ಬಗ್ಗೆ ತಿಳಿಸಿಲ್ಲ ಎಂದರೆ ಸರಿ. ಈ ಪಿರ್ಯಾದು ಸಲ್ಲಿಸುವ ಪೂರ್ವದಲ್ಲಿ ಪಿರ್ಯಾದುದಾರರು ನನಗೆ ನಿಪಿ.3 ರ ಪ್ರಕಾರ ನೋಟೀಸು ಕೊಟ್ಟಿದ್ದರು ಎಂದರೆ ಸರಿ. ನಿಪಿ.3 ರ ಸಂಗತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ನಾನು ನಿಡಿ.4

ನ್ನು ನಿಪಿ.3 ನ್ನು ಪಡೆದುಕೊಂಡ ನಂತರ ಬ್ಯಾಂಕಿಗೆ ಕೊಟ್ಟಿರುತ್ತೇನೆಂದರೆ ಸರಿ. ನಿಪಿ.8 ರ ಸಂಗಂತಿಗಳು ಸತ್ಯವಾಗಿರುತ್ತವೆ ಎಂದರೆ ಸರಿ. ನಾನು ಸಹಿ ಮಾಡಿದ ಯಾವುದೇ ಚೆಕ್ಕುಗಳನ್ನು ನನ್ನ ಬಳಿ ಇಟ್ಟುಕೊಂಡಿರಿಲ್ಲ ಎಂದರೆ ಸರಿ. ಕೊಳ್ಳೇಗಾಲ ನ್ಯಾಯಾಲಯದಲ್ಲೂ ಸಹ ನನ್ನ ವಿರುದ್ಧ ಚೆಕ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ 5 ಚೆಕ್ಕುಗಳ ಪೈಕಿ ಯಾವುದಾದರೂ ಚೆಕ್ಕು ನಗದೀಕರಣವಾಗಿದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ 5 ಚೆಕ್ಕುಗಳಿಗೆ ಸಂಬಂದಪಟ್ಟಂತೆ ಇಲ್ಲಿಯವರೆಗೆ ಯಾವುದೇ ವ್ಯವಹಾರ ಆಗಿದೆಯೋ ಇಲ್ಲವೋ ತಿಳಿದುಕೊಂಡಿಲ್ಲ. ದೇವರಾಜು ಎಂಬ ವ್ಯಕ್ತಿ ಕೊಳ್ಳೇಗಾಲ ನ್ಯಾಯಲಯದಲ್ಲಿ ನನ್ನ ವಿರುದ್ಧ ಚೆಕ್ಕು ಪ್ರಕರಣ ದಾಖಲು ಮಾಡಿರುತ್ತಾನೆಂದರೆ ಸರಿ. ಸದರಿ ಪ್ರಕರಣ ನಾನು ರಾಜಿ ಮಾಡಿಕೊಂಡಿರುತ್ತೇನೆಂದರೆ ಸರಿ. ಸದರಿ ದೇವರಾಜು ಸಲ್ಲಿಸಿದ್ದ ಪ್ರಕರಣದಲ್ಲಿದ್ದ ಚೆಕ್ಕು ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿದ್ದ ಚೆಕ್ಕುಗಳ ಪೈಕಿ ಯಾವುದೂ ಇರುವುದಿಲ್ಲ ಎಂದರೆ ಸರಿ. ನನಗೆ ಹಣ ಪಡೆದುಕೊಂಡು ಸಾಲ ತೀರುವಳಿಗೆ ಚೆಕ್ಕುಗಳನ್ನು ಕೊಡುವ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿ. ನಾನು ದಯಾಮರಣ ಕೋರಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೆ. ನಾನು ಆರೋಪ ಮಾಡಿದ ನಾಗರಾಜು ನನ್ನ ಜೊತೆಯಲ್ಲಿ ಕನ್ನಡ ಬೆರಳಚ್ಚುಗಾರನಾಗಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಮಲೆ ಮಹದೇಶ್ವರ ಬೆಟ್ಟದಲ್ಲಿ ಪೋಲೀಸ್ ಠಾಣೆ ಇರುತ್ತದೆ ಎಂದರೆ ಸರಿ. ಸದರಿ ನಾಗರಾಜು ಮೇಲೆ ಮಹದೇಶ್ವರ ಬೆಟ್ಟ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣ ಇನ್ನೂ ಬಾಕಿಯಿರುತ್ತದೆ. ಸದರಿ ಪ್ರಕರಣ ಬಾಕಿಯಿದ್ದ ಕುರಿತು ದಾಖಲಾತಿ ಹಾಜರು ಪಡಿಸಿಲ್ಲ. ನಾನು ಪಿರ್ಯಾದುದಾರರ ಜೊತೆ ವ್ಯವಹಾರ ಮಾಡಿದ್ದರೂ ಸಹ ಮಾಡಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ದಿಃ 16.05.2013 ರಂದು ಪಿರ್ಯಾದುದಾರರಿಂದ 4 ಲಕ್ಷ ಸಾಲ ಪಡೆದಿದ್ದೇನೆಂದರೆ ಸರಿಯಲ್ಲ. ಸಾಲ ತೀರುವಳಿಗಾಗಿ ನಿಪಿ.1 ನ್ನು ನಾನು ಪಿರ್ಯಾದುದಾರರಿಗೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಚೆಕ್ಕು ಅಮಾನ್ಯವಾಗಿರುತ್ತೆ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರ ಜೊತೆ ರಾಜಿ ಮಾತುಕತೆ ಮಾಡಿರುತ್ತೇನೆಂದರೆ ಸರಿ. ಸಾಕ್ಷಿ

ಮುಂದುವರೆದು ಖಾಲಿ ಪತ್ರಕ್ಕೆ ಸಹಿ ಹಾಕಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಎಷ್ಟು ಮೊತ್ತಕ್ಕೆ ರಾಜಿ ಮಾತುಕತೆ ಮಾಡಿರುತ್ತೇವೆಂದರೆ ಸಾಕ್ಷಿಯು ಎಷ್ಟು ಮೊತ್ತಕ್ಕೆ ಎಂದು ರಾಜಿ ಮಾಡಿಕೊಂಡಿಲ್ಲ, ಆದರೆ ಖಾಲಿ ಪತ್ರಕ್ಕೆ ಸಹಿ ಮಾಡಿ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ನಾನು ಖಾಲಿ ಪತ್ರದಲ್ಲಿ ಎಷ್ಟು ಸಹಿ ಮಾಡಿರುತ್ತೇನೆಂದು ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ರಾಜಿ ಮಾತುಕತೆ ಮಾಡಿದ ಬಗ್ಗೆ ತಿಳಿಸಿಲ್ಲ.

**ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ.